ಸರ್ ಎಂ. ವಿಶ್ವೇಶ್ವರಯ್ಯನವರ ಸಮಾಧಿ ದುಸ್ಥಿತಿಯಲ್ಲಿರುವ ಬಗ್ಗೆ

571 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. *ಸರ್ ಎಂ. ವಿಶ್ವೇಶ್ವರಯ್ಯನವರ ಸಮಾಧಿ ಇತ್ತೀಚಿನ ದಿನಗಳಲ್ಲಿ ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

2. *ಈ ಸಮಾಧಿಯನ್ನು ಸಂರಕ್ಷಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?*

ಶ್ರೀಮತಿ ರಾಣಿ ಸತೀಶ್ (ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು) :

1. ಇಲ್ಲ.

2. ಉದ್ಭವಿಸುವುದಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೇ, ವಿಶ್ವೇಶ್ವರಯ್ಯನವರು ಒಬ್ಬ ಮೇಧಾವಿ ಇಂಜಿನಿಯರ್, ಕನ್ನಂಬಾಡಿ ಅಣೆಕಟ್ಟೆಯನ್ನು ಕಟ್ಟಿದ ವ್ಯಕ್ತಿ ಮತ್ತು ಮೈಸೂರು ಸಾಬೂನು ಕಾರ್ಖಾನೆ, ಭದ್ರಾವತಿಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ ಸ್ಥಾಪನೆ ಮಾಡಿದ ಒಬ್ಬ ಧೀಮಂತ ವ್ಯಕ್ತಿಯಾಗಿದ್ದು, ಅವರನ್ನು ನಾವು ಯಾವಾಗಲೂ ನೆನಪಿನಲ್ಲಿಟ್ಟುಕೊಳ್ಳಬೇಕಾಗಿದೆ. ಅವರೊಬ್ಬ ಆದರ್ಶಪ್ರಾಯ ವ್ಯಕ್ತಿ. ನಾನು ಕೇಳಿದ ಪ್ರಶ್ನೆಗಳಿಗೆ ಇಲ್ಲ, ಉದ್ಭವಿಸುವುದಿಲ್ಲವೆಂಬ ಉತ್ತರ ನೀಡಿದ್ದಾರೆ. ಆದರೆ, ಪತ್ರಿಕಾ ಹೇಳಿಕೆಯಲ್ಲಿ ಬಂದದ್ದನ್ನು ಮತ್ತು ನನ್ನ ಮಾಹಿತಿ ಪ್ರಕಾರ ನೋಡಿದರೆ, ವಿಶ್ವೇಶ್ವರಯ್ಯನವರ ಸಮಾಧಿ ಬಹಳ ದುಸ್ಥಿತಿಯಲ್ಲಿದೆ. ಮುದ್ದೇನಹಳ್ಳಿ ಗ್ರಾಮ ಪೂರ್ಣವಾಗಿ ನಿರ್ಲಕ್ಷ್ಯಕ್ಕೊಳಗಾಗಿದೆ. ಆ ಸಮಾಧಿಗೆ ಹೋಗುವ ಮುಖ್ಯರಸ್ತೆಯ ಎರಡೂ ಕಡೆ ಕಸ, ಗೊಬ್ಬರವನ್ನು ಹಾಕಿ, ಅಲ್ಲಿಗೆ ಹೋಗಲಾರದ ಪರಿಸ್ಥಿತಿ ಇದೆ. ಬರೀ ನೆನಪಿನ ಸಲುವಾಗಿ ಅಲ್ಲೊಂದು ಕಲ್ಲನ್ನು ನಿರ್ಮಿಸಲಾಗಿದ್ದು, ಅದನ್ನು ಸಹ ಕಿತ್ತುಕೊಂಡು ಹೋಗಿದ್ದಾರೆ. ಆ ಸಮಾಧಿ ಮೇಲೆ ಹುಡುಗರು ಆಟವಾಡುತ್ತಿದ್ದಾರೆ. ಅಲ್ಲಿ ಯಾರೂ ಕೇಳುವವರೂ ಇಲ್ಲ, ಅದನ್ನು ಸಂರಕ್ಷಿಸುವವರೂ ಇಲ್ಲ. ಬಹು ಮುಖ್ಯವಾದುದೆಂದರೆ, ಅಲ್ಲಿ ಸಮಾಧಿ ಮತ್ತು ಮನೆ ಇದೆ. ಕಾಂಪೌಂಡ್ ಪಕ್ಕದಲ್ಲಿ ಪಶುವೈದ್ಯಕೀಯ ಆಸ್ಪತ್ರೆಯವರು ಪಶುಗಳ ಕೃತಕ ಗರ್ಭಧಾರಣೆಗೆ ಬಳಸುವ ಉಪಕರಣಗಳನ್ನು ಯಾವಾಗಲೂ ಅಲ್ಲಿ ಇಡುತ್ತಾರೆ. ನಮ್ಮ ಇತಿಹಾಸ ಪುರುಷರ, ವೀರ ಯೋಧರನ್ನು ನಾವು ಮರೆಯುತ್ತಿದ್ದೇವೆ. ಯಾವ ರೀತಿ ನಮ್ಮ ಕಿತ್ತೂರು ರಾಣಿ ಚೆನ್ನಮ್ಮನವರ ಸಮಾಧಿ ಇದೆ, ಶಿವರಾಮ ಕಾರಂತರು, ಪು.ತಿ.ನ.ರವರ ಸಮಾಧಿ ಇದೆ. ಇವುಗಳನ್ನು ನಾವು ಸ್ಮಾರಕವಾಗಿ ಇಡಬೇಕಿತ್ತು. ಆದರೆ, ಇವತ್ತು ನಾವು ಅವರನ್ನು ಮರೆತು ಅವರ ಸಮಾಧಿಗಳ ಬಗ್ಗೆ ದಿವ್ಯ ನಿರ್ಲಕ್ಷ್ಯ ಮಾಡುತ್ತಿದ್ದೇವೆ. ಸರ್ ಎಂ. ವಿಶ್ವೇಶ್ವರಯ್ಯನವರ ಸಮಾಧಿ ಸಹ ನಿರ್ಲಕ್ಷ್ಯಕ್ಕೊಳಗಾಗುತ್ತಿದೆ. ಈ ವಿಷಯ ಸರ್ಕಾರದ ಅಧಿಕಾರಿಗಳ ಗಮನಕ್ಕೆ ಬಂದಿಲ್ಲವೇ? ಮಾನ್ಯ ಸಚಿವರು ಬಹಳ ಕ್ರಿಯಾಶೀಲರಾಗಿದ್ದಾರೆ. ಅವರು, ಪ್ರಶ್ನೆ ಕೇಳಿದಾಗ, ಯಾರಾದರೂ ಒಬ್ಬ ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸಿ ವಿಚಾರ ಮಾಡಬೇಕಾಗಿತ್ತು. ಕೇವಲ ಗಮನಕ್ಕೆ ಬಂದಿಲ್ಲವೆಂಬ ಉತ್ತರ ನೀಡಿದ್ದಾರೆ. ಅಲ್ಲಿ ಈ

ರೀತಿಯ ವಾತಾವರಣವಿದೆ. ಶಿಸ್ತು ಇಲ್ಲವಾಗಿದೆ. ಏಕೆಂದರೆ ವಿಶ್ವೇಶ್ವರಯ್ಯನವರು ಶಿಸ್ತಿಗೆ ಹೆಸರಾದ ವ್ಯಕ್ತಿ. ಆ ಒಂದು ಮನೆ, ಸಮಾಧಿ ಇರುವ ಕಡೆ ಒಂದು ವ್ಯವಸ್ಥೆ ಇಲ್ಲ. ಸಂರಕ್ಷಣೆ ಮಾಡುವವರಿಲ್ಲ. ವಿಶ್ವೇಶ್ವರಯ್ಯನವರ ಸಮಾಧಿ ಹೌದೋ, ಅಲ್ಲವೋ ಎನ್ನುವ ರೀತಿಯಲ್ಲಿ ಅದು ಬಹಳ ನಿರ್ಲಕ್ಷ್ಯಕ್ಕೊಳಗಾಗಿದೆ. ಅದರ ಬಗ್ಗೆ ಸರ್ಕಾರ ತೀವ್ರ ಗಮನಹರಿಸಬೇಕೆಂದು ಕೇಳುತ್ತೇನೆ.

ಶ್ರೀ ಬಿ.ಬಿ. ಶಿವಪ್ಪ : ಸದಸ್ಯರ ಪ್ರಶ್ನೆಗೆ ಸಚಿವರು ನೀಡಿರುವ ಉತ್ತರ ಗಮನಿಸಿದರೆ, ವಿಶ್ವೇಶ್ವರಯ್ಯನವರು ಇದ್ದಾರೆಯೋ, ಇಲ್ಲವೋ ಎಂಬ ಪ್ರಶ್ನೆ ಏನಾದರೂ ಕೇಳಿದರೆ, ಯಾವ ರೀತಿಯ ಉತ್ತರ ದೊರೆಯುತ್ತದೆಯೋ ಗೊತ್ತಿಲ್ಲ. ಇಡೀ ಕರ್ನಾಟಕಕ್ಕೆ ಅಲ್ಲ. ದೇಶ, ಪ್ರಪಂಚಕ್ಕೆ ಅವಮರ್ಯಾದೆ ಮಾಡುವ ಉತ್ತರವಿದು. ವಿಶ್ವೇಶ್ವರಯ್ಯನವರ ಬಗ್ಗೆ, ಕರ್ನಾಟಕದ ನಿರ್ಮಾಣ ಮಾಡಿದ ಶಿಲ್ಪಿಣಿ ಬಗ್ಗೆ ಗೊತ್ತಿಲ್ಲದೇ ಇರುವವರೇ ಇಲ್ಲ. ಅವರ ಸಮಾಧಿ ಬಗ್ಗೆ ವಿರೋಧ ಪಕ್ಷದ ನಾಯಕರು ವಿವರಣೆ ಮಾಡಿದ್ದನ್ನು ನೋಡಿದರೆ, ಕಣ್ಣಲ್ಲಿ ನೀರು ಬರುತ್ತದೆ. ಇದಕ್ಕೆ ಸರ್ಕಾರ ಅವಕಾಶ ಕೊಡಬಾರದು. ಇಂಥದ್ದನ್ನು ನಾವು ಸಂರಕ್ಷಿಸಿ ಇಡಬೇಕು. ಇದರ ಬಗ್ಗೆ ವಿಧಾನ ಸಭೆಯಲ್ಲಿ ಪ್ರಶ್ನೆ ಎತ್ತಿ, ನಂತರ ಈ ರೀತಿ ಉತ್ತರ ದೊರಕುವುದಾದರೆ, ಇದಕ್ಕೆ ನಾನು ಮಂತ್ರಿಗಳನ್ನು ಆಕ್ಷೇಪಣೆ ಮಾಡುವುದಿಲ್ಲ, ಈ ರೀತಿ ಉತ್ತರ ಕೊಟ್ಟ ಅಧಿಕಾರಿಗಳ ಬಗ್ಗೆ ನಾವು ಗಮನ ತೆಗೆದುಕೊಳ್ಳಬೇಕಾಗುತ್ತದೆ. ವಿಶ್ವೇಶ್ವರಯ್ಯನವರು ಯಾರು? ಸರ್ ಎಂ. ವಿಶ್ವೇಶ್ವರಯ್ಯನವರ ಸಮಾಧಿ ಇದೆಯೋ, ಇಲ್ಲವೋ ಎಂಬುದು ಗೊತ್ತಿಲ್ಲ. ಅವರು ಯಾವ ಊರಿನವರೆಂದು ಕೇಳಿದರೆ, ಗೊತ್ತಿಲ್ಲ. ಸರ್ಕಾರದ ಪರಿಸ್ಥಿತಿ ಈ ರೀತಿ ಇರುವುದಾದರೆ ಇದು ನಾಚಿಕೆಗೇಡಿನ ಕೆಲಸ. ಈ ರೀತಿಯಾಗಬಾರದು. ತಕ್ಷಣ ಇದರ ಬಗ್ಗೆ ಗಮನಹರಿಸಿ, ಸಚಿವರು ಪ್ರವಾಸ ಮಾಡಿ, ಅಲ್ಲಿನ ವಾತಾವರಣವನ್ನು ಅವರೇ ಸ್ವತಃ ಸ್ಪಡಿ ಮಾಡಿ, ಅದಕ್ಕೆ ತಕ್ಕಂತೆ ಸೂಕ್ತವಾದ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದು ಕೇಳುತ್ತೇನೆ.

ಶ್ರೀಮತಿ ರಾಣಿ ಸತೀಶ್ : ಮಾನ್ಯ ಗೌರವಾನ್ವಿತ ಇಬ್ಬರೂ ಸದಸ್ಯರೂ ಸರ್ ಎಂ. ವಿಶ್ವೇಶ್ವರಯ್ಯನವರ ಬಗ್ಗೆ ಕಾಳಜಿಯ ವಿಚಾರವನ್ನು ಹೇಳಿದರು. ನಿಜಕ್ಕೂ ಸರ್ಕಾರಕ್ಕೆ ಅದರ ಬಗ್ಗೆ ಚಿಂತನೆ ಇದೆ. ಮಾನ್ಯ ಶಿವಪ್ಪನವರು, ಸರ್ಕಾರ ಕೊಟ್ಟ ಉತ್ತರದ ಧಾಟಿ ಸರಿಯಿಲ್ಲವೆಂದರು. ತಾಂತ್ರಿಕವಾಗಿ ಹೇಳುವುದಾದರೆ, ವಿಶ್ವೇಶ್ವರಯ್ಯನವರ ಸಮಾಧಿ ಕೋಲಾರ ಜಿಲ್ಲೆಯಲ್ಲಿದ್ದು, ಮೂಲಭೂತವಾಗಿ ಇದು ಕರ್ನಾಟಕ ರಾಜ್ಯ ಪ್ರಾಚ್ಯವಸ್ತು ಸಂಗ್ರಹಾಲಯ ನಿರ್ದೇಶನಾಲಯದ ವ್ಯಾಪ್ತಿಗೆ ಬರುವುದಿಲ್ಲವಾದರೂ ಅವರ ಸಮಾಧಿ ಹಾಗೂ ತೋಟವನ್ನು ತೋಟಗಾರಿಕೆ ಇಲಾಖೆ ನೋಡಿಕೊಳ್ಳುತ್ತಿದೆ. ಅವರ ಮನೆ ಲೋಕೋಪಯೋಗಿ ಇಲಾಖೆ ಅಡಿಯಲ್ಲಿ ಬರುತ್ತಿದೆ. ಅವರ ಮನೆಯಲ್ಲಿ ಒಂದು ವಸ್ತು ಸಂಗ್ರಹಾಲಯವಿದ್ದು, ಅವರ ಕುಟುಂಬದ ಸದಸ್ಯರು ಇರುವ ಟ್ರಸ್ಟ್ ಅದನ್ನು ನೋಡಿಕೊಳ್ಳುತ್ತಿದೆ. ಇದು ಅವರವರ ಕಾರ್ಯ ವ್ಯಾಪ್ತಿಯಲ್ಲಿ ಬರುವ ಹಿನ್ನೆಲೆಯಲ್ಲಿ, ನನ್ನ ವ್ಯಾಪ್ತಿಗೆ ಬರದಿದ್ದರೂ, ನಾನೇ ಸ್ವತಃ ಡಿಸಿಯವರಿಗೆ ದೂರವಾಣಿ ಮಾಡಿ, ಅವರು ಊರಿನಲ್ಲಿಲ್ಲದಿದ್ದರೂ, ಅದರ ಪೂರ್ಣ ವರದಿಯನ್ನು ನೀಡಲು ಜಿಲ್ಲಾಧಿಕಾರಿಗಳಿಗೆ ಈಗಾಗಲೇ ಸೂಚಿಸಿದ್ದೇನೆ. ಅದನ್ನು ನಾನು ಮುಕ್ತವಾಗಿ, ಗಂಭೀರವಾಗಿ ತೆಗೆದುಕೊಂಡು ಸಂಬಂಧಪಟ್ಟವರಿಗೆ ಪತ್ರ ಬರೆದು, ದೂರವಾಣಿ ಮೂಲಕ ಸಂಪರ್ಕಿಸಿದ್ದೇನೆ. ಆ

ಹಿನ್ನೆಲೆಯಲ್ಲಿ ಈ ರೀತಿಯ ಉತ್ತರ ಕೊಟ್ಟಿದ್ದೇನೆಯೇ ಹೊರತು, ಆ ಉತ್ತರವನ್ನು ತಪ್ಪಾಗಿ ಭಾವಿಸಬಾರದೆಂಬ ವಿಚಾರವನ್ನು ಹೇಳುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ : ನನ್ನದೊಂದು ಪ್ರಶ್ನೆ.

ಅಧ್ಯಕ್ಷರು : ನಿಮ್ಮ ಪ್ರಶ್ನೆಗಳೇ ಇವೆ.

ಶ್ರೀ ಎಸ್. ಸುರೇಶ್ ಕುಮಾರ್ : ನಮ್ಮದು ಟೋಟಲಿ ಕೃತಜ್ಞ ಸಮಾಜವೆಂದು ನನಗೆ ಅನ್ನಿಸುತ್ತದೆ. ಇದ್ದಾಗ ಬಹಳ ಓಲೈಸುತ್ತೇವೆ, ತೀರಿಹೋದಾಗ, ತಿರಸ್ಕಾರವಾಗಿ ನೋಡುತ್ತೇವೆ. ಅ.ನ.ಕೃ.ರವರ ಮನೆ ಬಗ್ಗೆ ಕೇಳಿದೆ. ಅದೊಂದು ಚಪ್ಪಲಿ ಅಂಗಡಿ ಇದ್ದ ಹಾಗಿದೆ. ಈ ರೀತಿ ಇರುವಾಗ, ವಿಶ್ವೇಶ್ವರಯ್ಯನವರ ಬಗ್ಗೆ ತಮಗೆ ಗೊತ್ತಿದೆ, "He was the only engineer. All others have become engineering graduates." ಈ ರೀತಿ ಇರುವಾಗ, ಸರ್ಕಾರಕ್ಕೆ ನನ್ನದೊಂದು ಸಲಹೆ, ಈ ಸ್ಮಾರಕಗಳನ್ನು ರಕ್ಷಣೆ ಮಾಡುವುದಕ್ಕೆ ಒಂದು ಪ್ರಾಧಿಕಾರ ರಚಿಸಿ ಅದಕ್ಕೆ ಒಬ್ಬ ಅಧ್ಯಕ್ಷರನ್ನು ನೇಮಿಸುತ್ತೀರಾ ?

ಶ್ರೀಮತಿ ರಾಣಿ ಸತೀಶ್ : ಮಾನ್ಯ ಸದಸ್ಯರು ಹೇಳುವ ವಿಚಾರ ಬಹಳ ಗಂಭೀರವಾಗಿದೆ. ಹಿಂದೆ ಗತಿಸಿ ಹೋದವರ ಸಮಾಧಿಗಳನ್ನು ಸಂರಕ್ಷಣೆ ಮಾಡುವ ವಿಚಾರವನ್ನು ಸರ್ಕಾರ ಪರಿಶೀಲಿಸುತ್ತಿದೆ. ಮತ್ತೆ, ಅ.ನ.ಕೃ. ರವರ ಮನೆ ಬಗ್ಗೆ ಹೇಳುವುದಾದರೆ, ಅವರ ಮಗ ಈಗಾಗಲೇ ನನಗೆ ದೂರವಾಣಿ ಮಾಡಿ, ವಿಚಾರ ತಿಳಿಸಿದ್ದಾರೆ. ಅದು ಸರ್ಕಾರದ ಪರಿಶೀಲನೆಯಲ್ಲಿದೆ. ತಮ್ಮ ವಿಚಾರದ ಬಗ್ಗೆ ಸರ್ಕಾರ ಗಮನಹರಿಸುತ್ತದೆ.

ಮೀನುಗಾರರಿಗೆ ಮನೆಗಳನ್ನು ನಿರ್ಮಿಸುವುದು

572 - ಶ್ರೀ ನಾರಾಯಣಸ್ವಾಮಿ (ಆನೇಕಲ್) : ಮಾನ್ಯ ಮೀನುಗಾರಿಕೆ, ಬಂದರು ಮತ್ತು ಪ್ರದೇಶಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿರುವ ಮೀನುಗಾರರಿಗೆ ಮನೆಗಳನ್ನು ನಿರ್ಮಿಸಲು ಯೋಜನೆ ಸರ್ಕಾರದ ಮುಂದೆ ಇದೆಯೇ ?

ಆ) ಹಾಗಿದ್ದಲ್ಲಿ ಎಷ್ಟು ಸಾವಿರ ಮನೆಗಳನ್ನು ನಿರ್ಮಿಸಲಾಗುವುದು ? ಪ್ರತಿ ಮನೆಗೆ ಎಷ್ಟು ಸಾವಿರ ಹಣ ಖರ್ಚು ಮಾಡಲಾಗುವುದು ?

ಇ) ಯಾವ ಯಾವ ಜಿಲ್ಲೆಗಳಲ್ಲಿ ಎಷ್ಟು ಮನೆಗಳನ್ನು ನಿರ್ಮಿಸಲಾಗುವುದು ? (ಜಿಲ್ಲಾವಾರು ಮಾಹಿತಿ ನೀಡುವುದು)

ಶ್ರೀ ಬಿ. ರಮಾನಾಥ ರೈ (ಮೀನುಗಾರಿಕೆ, ಬಂದರು ಮತ್ತು ಪ್ರದೇಶಾಭಿವೃದ್ಧಿ ಸಚಿವರು) :

ಅ) ಹೌದು.

ಆ) 5000 ಹೆಚ್ಚುವರಿ ಮನೆಗಳನ್ನು ನಿರ್ಮಿಸುವುದರ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆ. ಪ್ರತಿ ಮನೆಗೆ ರೂ. 30,000.00 ಖರ್ಚು ಮಾಡಲಾಗುವುದು.